# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 179 | Pages. 2 | Date: 24-05-2025, SATURDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 179 - ಪುಟಗಳು : 2 - 24 ಮೇ 2025 ಶನಿವಾರ | Ph: 8762954248 | ದರ : ₹1


# ಕೂಲಿ ಮಹಿಳೆ ಕೊಂದ ಕಾಡಾನೆ

## ಅಮಾಯಕರ ಸಾವಿಗೆ ಕಣ್ಣೀರು-ಆಕ್ರೋಶ-ಪ್ರತಿಭಟನೆ ಅದೇ ಪರಿಹಾರದ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ತಾಲೂಕಿನಲ್ಲಿ ಕಾಡಾನೆ-ಮಾನವರ ನಡುವಿನ ಸಂಘರ್ಷ ತಾರಕಕ್ಕೇರಿದ್ದು, ಆನೆ ದಾಳಿಗೆ ಮತ್ತೊಂದು ಬಲಿಯಾಗಿದೆ. ತೋಟದ ಕೆಲಸಕ್ಕೆ ತೆರಳುತ್ತಿದ್ದ ಮಹಿಳೆ ಮೇಲೆ ಕಾಡಾನೆ ಏಕಾಏಕಿ ದಾಳಿ ಮಾಡಿ ಬಲಿ ಪಡೆದಿದೆ. ತಾಲೂಕಿನ ಅಂಕಿಹಳ್ಳಿ ಗ್ರಾಮದಲ್ಲಿ ಈ ದುರಂತ ಘಟಿಸಿದ್ದು, ಗಜೇಂದ್ರಪುರ ಗ್ರಾಮದ ಚಂದ್ರಮ್ಮ (45) ಮೃತ ಮಹಿಳೆ. ಚಂದ್ರಮ್ಮ ಸೇರಿದಂತೆ ಒಟ್ಟು 12 ಮಹಿಳೆಯರು ತೋಟದ ಕೆಲಸಕ್ಕೆ ತೆರಳುತ್ತಿದ್ದ ವೇಳೆ ಏಕಾಏಕಿ 5 ಕಾಡಾನೆ ಹಿಂಡು ದಾಳಿ ಮಾಡಿವೆ. ಈ ವೇಳೆ ಎಲ್ಲರೂ ದಿಕ್ಕಪಾಲಾಗಿ ಓಡಿದ್ದು, ದುರದೃಷ್ಟವಶಾತ್ ಚಂದ್ರಮ್ಮ ಕಾಡಾನೆಗೆ ಸಿಲುಕಿ ಜೀವ ಕಳೆದುಕೊಂಡಿದ್ದಾರೆ. ಸೊಂಡಿಲಿನಿಂದ ಎತ್ತಿ ಬಿಸಾಡಿ, ಕಾಲಿನಿಂದ ತುಳಿದು ಬರ್ಬರವಾಗಿ ಜೀವ ತೆಗೆದಿದೆ. ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರು ದೌಡಾಯಿಸಿದ್ದಾರೆ. ರಸ್ತೆ ತಡೆ: ಮಲೆನಾಡು ಭಾಗದಲ್ಲಿ ಕಾಡಾನೆ ದಾಳಿ ಮಿತಿ ಮೀರಿದ್ದು, ಕೂಲಿ ಕಾರ್ಮಿಕರೇ ಹೆಚ್ಚಾಗಿ ಬಲಿಯಾಗುತ್ತಿರುವುದು ಈ ಭಾಗದ ಜನರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಕೂಡಲೇ ಆನೆಗಳನ್ನು ಸೆರೆ ಹಿಡಿದು ಸ್ಥಳಾಂತರಿಸುವಂತೆ ಹತ್ತಾರು ಬಾರಿ ಮನವಿ ಮಾಡಿದರೂ ಸರ್ಕಾರವಾಗಲೀ, ಅರಣ್ಯ ಇಲಾಖೆಯಾಗಲೀ ತಲೆಕೆಡಿಸಿ ಕೊಳ್ಳುತ್ತಿಲ್ಲ ಎಂದು ಆರೋಪಿಸಿ ಸ್ಥಳೀಯರು ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಅದ್ದೂರಿ ಚೇತನ್ ಕುಮಾರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಮೃತದೇಹ ಮೇಲೆತ್ತಲು ಬಿಡದೆ, ರಸ್ತೆ ತಡೆದು ಪ್ರತಿಭಟನೆ ನಡೆಸುತ್ತಿದ್ದಾರೆ. ಸ್ಥಳಕ್ಕೆ ಬಂದ ಆಂಬ್ಯುಲೆನ್ಸ್ ಹಾಗೂ ಅಧಿಕಾರಿಗಳ ವಾಹನ ತಡೆದು ನಮಗೆ ಶಾಶ್ವತ ಪರಿಹಾರ ಬೇಕು. ನೊಂದ ಕುಟುಂಬಕ್ಕೆ ಸಾಂತ್ವನ ಹೇಳಲು ಮೇಲಾಧಿಕಾರಿಗಳು, ಸಚಿವರು ಬಂದು ನಮಗೆ ಸೂಕ್ತ ನ್ಯಾಯ ದೊರಕುವರೆಗೂ ಶವ ಮೇಲೆತ್ತಲು ಬಿಡುವುದಿಲ್ಲ ಎಂದು ಮಳೆಯ ನಡುವೆಯೂ ಪ್ರತಿಭಟನೆ ಮುಂದುವರಿಸಿದರು.

### ಮಹಿಳೆ ಬಚಾವ್!

ಬೆಳ್ಳಂಬೆಳಿಗ್ಗೆ ದೈತ್ಯಾಕಾರದ ಕಾಡಾನೆಯೊಂದು ವಾಸದ ಮನೆಯ ಮುಂದೆಯೇ ಸಾಗಿ ಹೋದ ಘಟನೆ ಸಕಲೇಶಪುರ ತಾಲೂಕಿನ ಕೆರೋಡಿ ಗ್ರಾಮದಲ್ಲಿ ನಡೆದಿದೆ. ಆದರೂ ಇದರ ಅರಿವಿಲ್ಲದ ಮಹಿಳೆ ತನ್ನ ಪಾಡಿಗೆ ತಾನು ರಂಗೋಲಿ ಬಿಡಿಸಿ ಮನೆಯೊಳಗೆ ಹೋಗಿದ್ದಾರೆ. ಸಿಸಿ ಪರಿಶೀಲಿಸಿದ ನಂತರ ತನ್ನ ಪಕ್ಕದಲ್ಲೇ ಆನೆ ಹೋಗಿರುವುದನ್ನು ಕಂಡು ಮಹಿಳೆ ಬೆಚ್ಚಿ ಬಿದ್ದಿದ್ದಾರೆ. ನಂತರ ರಸ್ತೆಯಲ್ಲಿ ಕೆಲಸಗಾರರಿಗೆ ಒಂಟಿಸಲಗ ಎದುರಾಗಿದ್ದು, ಓಡಿ ಹೋಗಿ ಪ್ರಾಣ ಉಳಿಸಿಕೊಂಡಿದ್ದಾರೆ.



### 6 ಮಂದಿ ಬಲಿ

ಕೇವಲ ಅಮಾಯಕರೇ ಆನೆ ದಾಳಿ ಬಲಿಯಾಗುತ್ತಿದ್ದಾರೆ. ಕಳೆದ ಮೂರ್ನಾಲ್ಕು ತಿಂಗಳ ಅಂತರದಲ್ಲಿ 6 ಮಂದಿ ಮೃತಪಟ್ಟಿದ್ದಾರೆ. ಅರಣ್ಯ ಸಚಿವರು ಕೇವಲ ಭರವಸೆ ನೀಡುತ್ತಿದ್ದಾರೆಯೇ ಹೊರತು ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರ ಕಂಡು ಹಿಡಿಯುವಲ್ಲಿ ವಿಫಲರಾಗಿದ್ದಾರೆ ಎಂದು ಕಿಡಿಕಾರಿದರು. ಸ್ಥಳಕ್ಕೆ ಅರಣ್ಯ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಆಗಮಿಸಬೇಕು, ಅಲ್ಲಿಯವರೆಗೂ ಮೃತದೇಹ ಮೇಲೆತ್ತಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ.

ಇದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಯಾವುದೇ ಅಹಿತರಕ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಗ್ರಾಮಸ್ಥರಾದ ಪುನೀತ್ ಹಾಗೂ ಕೃಷ್ಣ ಮಾತನಾಡಿ, ಬೆಳಗ್ಗೆ 7.45ರಲ್ಲಿ ಕೂಲಿ ಕಾರ್ಮಿಕ ಮಹಿಳೆ ಬಲಿಯಾಗಿದ್ದಾರೆ. ಅರಣ್ಯ ಇಲಾಖೆಯವರು ಈ ಭಾಗದಲ್ಲಿ ಆನೆಗಳ ಬಗ್ಗೆ ಮಾಹಿತಿ ನೀಡುತ್ತಿಲ್ಲ. ನಮಗೆ ನಿಮ್ಮ ಪರಿಹಾರ ಬೇಡ. ಆ ಕುಟುಂಬಕ್ಕೆ, ತಬ್ಬಲಿ ಮಕ್ಕಳಿಗೆ ಯಾರು ಸಾಂತ್ವಾನ ಹೇಳೋರು ಎಂದು ಕಣ್ಣೀರು ಹಾಕಿದರು.

### ಮನವೊಲಿಸಿದ ಅಧಿಕಾರಿಗಳು

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಅಧಿಕಾರಿಗಳು, ಹಲವು ಭರವಸೆ ನೀಡಿ ಪ್ರತಿಭಟನಾಕಾರರ ಮನವೊಲಿಸುವಲ್ಲಿ ಯಶಸ್ವಿಯಾದರು. ಈಗಿನಿಂದಲೇ ಕಾಡಾನೆ ಚಲನ ವಲನದ ಬಗ್ಗೆ ಸರಿಯಾದ ಮಾಹಿತಿ ಪಡೆದು, ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲು ಸರ್ಕಾರದೊಂದಿಗೆ ಚರ್ಚೆ ನಡೆಸುತ್ತೇವೆ. ರಾತ್ರಿ ವೇಳೆ ವಿದ್ಯುತ್ ಕಡಿತ ಮಾಡದಂತೆ ಸೆಸ್ಕಾಂ ಇಲಾಖೆಗೆ ಸೂಚನೆ ನೀಡಲಾಗಿದೆ. ಕಾಡಾನೆ ಹಾವಳಿ ತಪ್ಪಿಸಲು ಸಾಕಷ್ಟು ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿ ಮೃತರ ಕುಟುಂಬಕ್ಕೆ 20 ಲಕ್ಷದ ಪರಿಹಾರದ ಚೆಕ್ ವಿತರಿಸಿದರು. ಬಳಿಕ ಪ್ರತಿಭಟನಾಕಾರರು ಧರಣಿ ಹಿಂಪಡೆದರು. ಮರಣೋತ್ತರ ಪರೀಕ್ಷೆ ಗಾಗಿ ಮೃತದೇಹವನ್ನು ಬೇಲೂರು ತಾಲ್ಲೂಕು ಆಸ್ಪತ್ರೆಗೆ ಕೊಂಡೊಯ್ಯಲಾಯಿತು.



### ಡಿಸಿ-ಎಸ್ಪಿ ಭೇಟಿ

ಸ್ಥಳಕ್ಕೆ ಜಿಲ್ಲಾಧಿಕಾರಿ ಸಿ.ಸತ್ಯಭಾಮ, ಎಸ್ಪಿ ಮೊಹಮ್ಮದ್ ಸುಜೀತಾ, ಸಿಸಿಎಫ್ ಏಡುಕುಂಡಲ, ಡಿಎಫ್ಓ ಸೌರಭ್‌ಕುಮಾರ್ ಆಗಮಿಸಿ ಪ್ರತಿಭಟನಾಕಾರರ ಸಮಸ್ಯೆ ಆಲಿಸಿದರು. ಮೃತ ಮಹಿಳೆ ಜೊತೆಗಿದ್ದ ಮಹಿಳೆಯರು ಕಣ್ಣೀರಿಟ್ಟು, ಕಾಡಾನೆ ಪೀಡಿತ ಪ್ರದೇಶದ ಜನರು ನಿತ್ಯ ಅನುಭವಿಸುತ್ತಿರುವ ಸಮಸ್ಯೆಗಳನ್ನು ಅಧಿಕಾರಿಗಳ ಮುಂದೆ ತೆರೆದಿಟ್ಟರು.

# ಮಡೆನೂರು ಮನು ಮೇಲಿನ ಆರೋಪ ಸುಳ್ಳು ಎಂದ ಪತ್ನಿ

## ಗಂಡನ ಪರ ಹೋರಾಡುವೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾಮಿಡಿ ಕಿಲಾಡಿ ಶೋ ನಲ್ಲಿ ಭಾಗಿಯಾಗಿದ್ದ ಸಂತ್ರಸ್ತೆ ನಟಿ ಹೇಳೋದೆಲ್ಲ ಸುಳ್ಳು, ನನ್ನ ಗಂಡನಿಗೆ ನ್ಯಾಯ ಸಿಗುವ ತನಕ ಹೋರಾಡುತ್ತೇನೆ ಎಂದು ಆರೋಪಿ ನಟ ಮಡೆನೂರು ಮನು ಪತ್ನಿ ದಿವ್ಯಾ ಹೇಳಿದ್ದಾರೆ.

ನನ್ನ ಗಂಡ ಸಿನಿಮಾರಂಗದಲ್ಲಿ ಬೆಳೆಯುತ್ತಿದ್ದಾರೆ ಅಂತ ಷಡ್ಯಂತ್ರ ಮಾಡಿದ್ದಾರೆ. ಬೇಕಂತಲೇ ನನ್ನ ಗಂಡನ ವಿರುದ್ಧ ಪಿತೂರಿ ಮಾಡಲಾಗಿದೆ. ಮಚ್ಚಾ ನೀನು ಬೆಳೆಯಬೇಕು ಅಂತ ಅಂದು ಹೇಳಿದ್ದ ಗೆಳತಿ, ಈಗ್ಯಾಕೆ ಆರೋಪ ಮಾಡ್ತಿದ್ದಾರೆ. ಇದು ಬೇಕು ಅಂತಲೇ ಮಾಡ್ತಿರೋ ಆರೋಪ. ಆಕೆ ಬೇರೆಯವರ ಬಗ್ಗೆಯೂ ಇದೇ ಥರಾ ಆರೋಪ ಮಾಡಿದ್ದಾಳೆ. ಆಕೆ ಮತ್ತು ಪತಿ ಮನು ಜೊತೆಗಿನ ಸಂಬಂಧದ ಬಗ್ಗೆ ನನಗೇನು ಗೊತ್ತಿಲ್ಲ. ಆದರೆ ಆಕೆ ಹೇಳಿರೋದೆಲ್ಲ ಸುಳ್ಳು, ನನ್ನ ಗಂಡನಿಗೆ ನ್ಯಾಯ ಸಿಗೋ ತನಕ ಹೋರಾಡುತ್ತೇನೆ ಎಂದರು.

ನನ್ನ ಗಂಡ ಬೇರೆಯವರ ಹಿಂದೆ ಹೋದರೆ, ನಾನು ಸುಮ್ಮನೆ ಇರುತ್ತಿರಲಿಲ್ಲ. ರಿಯಾಲಿಟಿ ಶೋನಲ್ಲಿ ಸ್ಕಿಪ್ಟ್ ರಿಹರ್ಸಲ್ ಹೇಗಿರತ್ತೋ ಹಾಗೆ ಇಲ್ಲಿಯೂ ಏನೋ ಆಗಿರತ್ತೆ. ಎಲ್ಲದಕ್ಕೂ ತನಿಖೆ ಆಗಬೇಕು, ಸತ್ಯ ಹೊರಗಡೆ ಬರಬೇಕು ಎಂದು ಹೇಳಿದ್ದಾರೆ.

6 ತಿಂಗಳಿಂದ ನನ್ನ ಗಂಡ ಕಷ್ಟಪಟ್ಟು ಬಾಡಿ ಬಿಲ್ಡಿಂಗ್ ಮಾಡಿದ್ದಾರೆ. ಬಾಡಿ ಬಿಲ್ಡಿಂಗ್ ಮಾಡೋದು ಎಷ್ಟು ಕಷ್ಟ ಅಂತ ಎಲ್ಲರಿಗೂ ಗೊತ್ತಿದೆ. 3 ವರ್ಷದಿಂದ ಈ ಸಿನಿಮಾಗಾಗಿ ಕಷ್ಟಪಟ್ಟಿದ್ದಾರೆ. ಇಂದು ನನ್ನ ಗಂಡ ಥಿಯೇಟರ್‌ನಲ್ಲಿ ಇಲ್ಲ. ನನಗೆ ಈ ವಿಷಯ ತುಂಬಾ ಬೇಸರ ಆಗಿದೆ. ನಿರ್ಮಾಪಕರು ಚಿತ್ರತಂಡ ಕಷ್ಟಪಟ್ಟು ಸಿನಿಮಾ ಮಾಡಿದ್ದಾರೆ. ಈ ಸಿನಿಮಾ ನೋಡಿ ಎಂದು ಮನು ಪತ್ನಿ ಮನವಿ ಮಾಡಿದ್ದಾರೆ. ವೈಯಕ್ತಿಕ ವಿಚಾರ ಬಿಡಿ, ಸಿನಿಮಾ ನೋಡಿ ಬೆಂಬಲಿಸಿ ಎಂದಿದ್ದಾರೆ.

# ಮಕ್ಕಳಿಂದ ಪೌರಾಣಿಕ ನಾಟಕ ಪ್ರದರ್ಶನ ಮಾಡಿಸಲು ಆಡಿಷನ್




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಚನ್ನರಾಯಪಟ್ಟಣದಲ್ಲಿ ಮಕ್ಕಳಿಗಾಗಿ, ಮಕ್ಕಳಿಗೋಸ್ಕರ ಆರಂಭಿಸಲಾಗಿರುವ ಮಹಾಭುಜ ಮಾರುತಿ ಇಂಡಿಯನ್ ಸೇವಾ ಟ್ರಸ್ಟ್ ವತಿಯಿಂದ ಮಕ್ಕಳಿಂದ ಕುರುಕ್ಷೇತ್ರ ಪೌರಾಣಿಕ ನಾಟಕ ಅಭಿನಯಿಸಲು ಯೋಜಿಸಲಾಗಿದೆ ಎಂದು ಸಿ.ಸಿ.ರಂಗಪ್ಪ ಮತ್ತು ಕೆ.ಹೆಚ್.ರಾಜೇಶ್ ತಿಳಿಸಿದರು.

ಇಂದು ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ನಾಟಕ ಕಲೆಯಲ್ಲಿ ಆಸಕ್ತಿ ಇರುವ ಮಕ್ಕಳನ್ನು ಆಯ್ಕೆ ಮಾಡಿಕೊಳ್ಳುವ ಸಲುವಾಗಿ ಆಡಿಷನ್ ನಡೆಸಲು ಮುಂದಾಗಿದ್ದೇವೆ ಎಂದರು.


ದುರ್ಯೋಧನ, ಭೀಮ, ಅರ್ಜುನ, ಕೃಷ್ಣ, ಕರ್ಣ, ಅಭಿಮನ್ಯು, ಶಕುನಿ, ವಿಧುರ, ದ್ರೋಣಚಾರ್ಯ ಸೇರಿದಂತೆ ವಿವಿಧ ಪಾತ್ರಗಳಿಗಾಗಿ 20 ಗಂಡು ಮಕ್ಕಳು ಮತ್ತು ಮಹಿಳೆಯರ ಪಾತ್ರಕ್ಕಾಗಿ 8 ಮಂದಿ ಹೆಣ್ಣು ಮಕ್ಕಳನ್ನು ಆಐಕೆ ಮಾಡಿಕೊಳ್ಳಬೇಕಿದೆ ಎಂದರು.

ಜೂ.15 ರಂದು ಮಾಹಭುಜ ಮಾರುತಿ ಇಂಡಿಯನ್ ಸೇವಾ ಟ್ರಸ್ಟ್‌ನಲ್ಲಿ ಆಡಿಷನ್ ನಡೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ ಶ್ರೀ ಮಾರುತಿ ಎಲೆಕ್ಟ್ರಾನಿಕ್ಸ್ ಲ್ಯಾಂಡ್ ಲಕ್ಷ್ಮಮ್ಮ ರಂಗಪ್ಪ ಸಂಕೀರ್ಣ ಭುವನೇಶ್ವರಿ ವೃತ್ತ ಬಾಗೂರು ರಸ್ತೆ, ಚನ್ನರಾಯಪಟ್ಟಣ, ದೂರವಾಣಿ 9739901500, ರಾಜೇಶ್ ಕೆಂಚೆನಹಳ್ಳಿ ಇವರನ್ನು ಸಂಪರ್ಕಿಸಲು ಕೋರಿದರು.

ಕಳೆದ 3 ವರ್ಷಗಳಿಂದ ಮಕ್ಕಳಿಂದ ಸೇವಾ ಟ್ರಸ್ಟ್ ಕನ್ನಡ ನಾಡಿನ ಕಲೆ, ಸಂಸ್ಕೃತಿ, ಜನಪದ, ನೃತ್ಯ, ನಾಟಕ, ಗಾಯನ ಸೇರಿದಂತೆ ಭಾರತದ ಮಣ್ಣಿನ ಕಲೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕೆಲಸ ಮಾಡಲಾಗುತ್ತಿದೆ ಎಂದರು. ಟ್ರಸ್ಟ್‌ನಿಂದ ಈಗಾಗಲೇ ನೃತ್ಯ ಅಭಿಯನಕ್ಕೆ ಉತ್ತೇಜನ ನೀಡಲಾಗಿದೆ. ಮಕ್ಕಳು ಹಾಡಿದ ಹಾಡುಗಳಿಗೆ ಸಂಗೀತ ಸಂಯೋಜಿಸಿ ಹಾಡು, ನೃತ್ಯದೊಂದಿಗೆ ವಿಡಿಯೋ ಆಲ್ಬಂ ಹೊರ ತರಲಾಗಿದೆ ಎಂದರು.

# ಕೆರೆಯಲ್ಲಿ ಮುಳುಗಿ ಇಬ್ಬರು ಬಾಲಕರ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಈಜಲು ಹೋಗಿದ್ದ ಇಬ್ಬರು ಬಾಲಕರು ನೀರುಪಾಲಾಗಿರುವ ಘಟನೆ ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ, ಅಣತಿ ಗ್ರಾಮದಲ್ಲಿ ನಡೆದಿದೆ. ನೂತನ್ (15) ಹಾಗೂ ಬೀರೇಶ್ (14) ಮೃತ ಬಾಲಕರು. ಬೇಸಿಗೆ ರಜೆ ಹಿನ್ನಲೆಯಲ್ಲಿ ವಳಗೇರಹಳ್ಳಿ ಗ್ರಾಮದ ಯಶ್ವಂತ್, ನೂತನ್, ಬೀರೇಶ್ ಪಕ್ಕದ ಅಣತಿ ಗ್ರಾಮದ ಕೆರೆಗೆ ಈಜಲು ತೆರಳಿದ್ದರು. ಈ ವೇಳೆ ಆಳವಾದ ಕೆರೆಗೆ ಇಳಿಯುತ್ತಿದ್ದಂತೆ ನೂತನ್ ಹಾಗೂ ಬೀರೇಶ್ ಮುಳುಗಿದ್ದಾರೆ. ಕಣ್ಣೆದುರು ಸಹೋದರರು ಮುಳುಗುತ್ತಿದ್ದನ್ನು ಕಂಡು ಯಶ್ವಂತ್ ರಕ್ಷಿಸಲು ಪರದಾಡಿದ್ದು ಯಾರಾದರೂ ಬನ್ನಿ ಎಂದು ಕಿರುಚಾಡಿದ್ದಾರೆ. ಆದರೆ ಯಶ್ವಂತ್‌ಗೆ ಈಜು ಬಾರದ ಕಾರಣ ಹಾಗೂ ಆ ಸ್ಥಳದಲ್ಲಿ ಯಾರು ಇಲ್ಲದಿದ್ದರಿಂದ ಸಹೋದರರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಕೆರೆಯಿಂದ ಶವಗಳನ್ನು ಹೊರತೆಗೆದಿದ್ದಾರೆ. ಮಕ್ಕಳನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲುಮುಟ್ಟಿತ್ತು. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ನುಗ್ಗೆಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಅರೆಂಜ್ಡ್ ಮ್ಯಾರೇಜ್ ಬೇಡ ಎಂದಾಕೆಯ ಲವ್ ಮ್ಯಾರೇಜ್!

## ಎಷ್ಟೇ ಮನವೊಲಿಸಿದರೂ ಒಪ್ಪದ ಯುವತಿ: ಬಂಧುಗಳಿಗೆ ನಿರಾಸೆ: ಲಕ್ಷಾಂತರ ರೂ. ನಷ್ಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇನ್ನೇನು ಕೊರಳಿಗೆ ತಾಳಿ ಬೀಳಬೇಕು ಅನ್ನುವಾಗ ವಧು ನನಗೆ ಮದುವೆ ಬೇಡ, ಈ ಮದುವೆ ಇಷ್ಟ ಎಂದಿದ್ದರಿಂದ ಲಕ್ಷಾಂತರ ರೂ. ಖರ್ಚು ಮಾಡಿ, ಹಲವು ದಿನಗಳಿಂದ ಮಾಡಿದ್ದ ಸಿದ್ಧತೆ ವ್ಯರ್ಥವಾಗಿ, ಮದುವೆ ಮುರಿದು ಬಿದ್ದಿದೆ.

ಹೀಗಾಗಿ ಮದುವೆಯ ಸಂಭ್ರಮ ಕಣ್ತುಂಬಿಕೊಳ್ಳಲು ಬಂದಿದ್ದ ನೂರಾರು ಮಂದಿ ನಿರಾಸೆಯಿಂದ ಮರಳಿದರು. ಅಲ್ಲದೆ ಸುಮಾರು ಒಂದೂವರೆ ಸಾವಿರ ಜನರಿಗೆ ಮಾಡಿಸಿದ್ದ ವಿವಿಧ ರೀತಿಯ ಅಡುಗೆ ವ್ಯರ್ಥವಾಯಿತು.



ನಗರದ ಹೊರ ವಲಯದ ಬೂವನಹಳ್ಳಿಯ ವಧು ಮತ್ತು ಆಲೂರು ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕನ ನಡುವೆ ಮೂರು ದಿನಗಳ ಹಿಂದೆಯೇ ಮದುವೆ ನಿಶ್ಚಯ ಆಗಿತ್ತು. ಬಳಿಕ ಇಬ್ಬರೂ ಫೋಟೋ ಶೂಟ್ ಸೇರಿದಂತೆ ಅನೇಕ ಕಡೆಗಳಿಗೆ ಜೊತೆ ಜೊತೆಯಾಗಿ ಒಡಾಡಿದ್ದರು. ಮದುವೆ ಶಾಸ್ತ್ರ ನಡೆಯುವಾಗಲೂ ವಧು ಯಾವುದೇ ವಿರೋಧ ವ್ಯಕ್ತಪಡಿಸಲಿಲ್ಲ. ವಧು-ವರ ಇಬ್ಬರೂ ಸಂತೋಷದಿಂದ ಶಾಸ್ತ್ರಗಳಲ್ಲಿ ಪಾಲ್ಗೊಂಡಿದ್ದರು.



ಎರಡೂ ಮನೆಯವರೂ ಒಪ್ಪಿ, ಇಂದು ನಗರದ ಎಂ.ಜಿ.ರಸ್ತೆಯಲ್ಲಿರುವ ಶ್ರೀ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಮದುವೆ ನಿಗದಿ ಮಾಡಿದ್ದರು.

ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ, ಇಷ್ಟೊತ್ತಿಗೆ ಮದುವೆ ಮುಗಿದು ಎಲ್ಲರೂ ಸಂತಸ, ಸಮಾಧಾನದಿಂದ ತಮ್ಮ ತಮ್ಮ ಮನೆ ಸೇರಿಕೊಳ್ಳುತ್ತಿದ್ದರು.

ಆದರೆ ಇನ್ನೇನು ತಾಳಿ ಕಟ್ಟಬೇಕು ಅನ್ನುವಷ್ಟರಲ್ಲಿ ತಗಾದೆ ತೆಗೆದ ವಧು, ನನಗೆ ಈ ಮದುವೆ ಬೇಡ ಎಂದು ಮಾಂಗಲ್ಯಧಾರಣೆಗೆ ನಿರಾಕರಿಸಿದಳು. ಯಾರು ಮನವೊಲಿಸಿದರೂ ವಧು ತನ್ನ ಹಠ ಸಡಿಲಿಸಲಿಲ್ಲ.

ಬದಲಾಗಿ ಕಲ್ಯಾಣ ಮಂಟಪದ ವಧುವಿನ ಕೊಠಡಿ ಸೇರಿಕೊಂಡಳು. ಕಡೆಗೆ ನಗರ ಹಾಗೂ ಬಡಾವಣೆ ಠಾಣೆ ಪೊಲೀಸರು ಸ್ಥಳಕ್ಕಾಗಮಿಸಿ ಹುಡುಗಿಯನ್ನು ಕರೆದುಕೊಂಡು ಹೋದರು.

ಇತ್ತ ಮದುವೆ ಬದಲು ಬೇರೆಯೇ ನಡೆಯುತ್ತಿದೆಯಲ್ಲ ಎಂದು ಕೆಲವರು ಕ್ಷಣಹೊತ್ತು ಗೊಂದಲಕ್ಕೆ ಒಳಗಾದರು. ಕಡೆಗೆ ಮದುವೆ ನಡೆಯದೆ ಎಲ್ಲರೂ ನಿರಾಶೆಯಿಂದ ತೆರಳಿದರು. ಈ ವೇಳೆ ಕೆಲವರು ಯುವತಿ ವರ್ತನೆಯನ್ನು ತೀವ್ರವಾಗಿ ಖಂಡಿಸಿದರು.

ಈ ನಡುವೆ ಮದುವೆ ನಿಂತಿದ್ದರಿಂದ ನಮಗೆ ಅನ್ಯಾಯವಾಗಿದೆ ಎಂದು ಆರೋಪಿಸಿರುವ ವರನ ಕಡೆಯವರು ನಾವು ಖರ್ಚು ಮಾಡಿರುವ ಹಣ ವಾಪಸ್ ಕೊಡಿ ಎಂದು ಕೇಳುತ್ತಿದ್ದರೆ, ಇದರಿಂದ ಕುಟುಂಬದ ಗೌರವಕ್ಕೆ ಧಕ್ಕೆಯಾಗಿದೆ ಎಂದು ವಧುವಿನ ಮನೆಯವರು ಒಂದೇ ಸಮನೆ ಕಣ್ಣೀರು ಇಡುತ್ತಿದ್ದಾರೆ.

### ಪ್ರೀತಿ-ಪ್ರೇಮ ಕಾರಣ

ಮೂಲಗಳ ಪ್ರಕಾರ, ಇಂದಿನ ಮದುವೆ ಮುರಿದು ಬೀಳಲು ಪ್ರೇಮ ಪುರಾಣ ಕಾರಣ ಎನ್ನಲಾಗಿದೆ. ವಧು, ಗೊರೂರು ಮೂಲದ ಯುವಕನನ್ನು ಪ್ರೀತಿಸುತ್ತಿದ್ದಳು ಎನ್ನಲಾಗಿದೆ. ಇದೇ ಕಾರಣಕ್ಕೆ ಆಕೆ ಮದುವೆ ನಿರಾಕರಿಸಿ ದ್ದಾಳೆ. ಪ್ರಿಯಕರನ ಕಡೆಯಿಂದ ದೂರವಾಣಿ ಕರೆ ಬರುತ್ತಿದ್ದಂತೆಯೇ ವಧು, ಮನೆಯವರು ಗೊತ್ತು ಮಾಡಿದ್ದ ವರನಿಂದ ತಾಳಿ ಕಟ್ಟಿಸಿಕೊಳ್ಳಲು ನಿರಾಕರಿಸುವ ನಿರ್ಧಾರಕ್ಕೆ ಬಂದಳು ಎನ್ನಲಾಗಿದೆ. ಈ ನಡುವೆ ಬಡಾವಣೆ ಪೊಲೀಸ್ ಠಾಣೆಯಲ್ಲೂ ಯುವತಿ ಮನವೊಲಿಸುವ ಕೆಲಸ ವಿಫಲ ವಾಯಿತು. ಈ ವೇಳೆ ನಾನು ಪ್ರೀತಿಸುತ್ತಿರುವ ಹುಡುಗನನ್ನೇ ಮದುವೆ ಆಗುವೆ ಎಂದು ಯುವತಿ ಹೇಳಿಕೆ ನೀಡಿದ್ದಾಳೆ ಎನ್ನಲಾಗಿದೆ.

ಮಗಳ ವರ್ತನೆಯಿಂದ ಕಂಗಾಲಾದ ತಾಯಿ ಹೀಗೆಲ್ಲಾ ಮಾಡಬೇಡ, ಕುಟುಂಬದ ಮರ್ಯಾದೆ ಹಾಳು ಮಾಡಬೇಡ ಎಂದು ಕಿವಿಯಲ್ಲಿ ಬುದ್ಧಿಮಾತು ಹೇಳಿದರೂ ವಧು ಮಾತ್ರ ತನ್ನ ನಿರ್ಧಾರ ಬದಲಿಸಲಿಲ್ಲ. ಮದುವೆ ಬೇಡ ಎಂಬ ಹಠಕ್ಕೆ ಗಂಟು ಬಿದ್ದು ನಿಂತಳು. ಈ ವೇಳೆ ಕೈಯಲ್ಲಿ ತಾಳಿ ಹಿಡಿದು ವರ ಏನಾಯಿತು, ಏಕೆ, ಎಂದೆಲ್ಲಾ ಪ್ರಶ್ನೆ ಮಾಡಿದ್ದಾನೆ. ಕಡೆಗೆ ಕಣ್ಣೀರಿಟ್ಟರೂ ವಧು ಮನಸ್ಸು ಮಾತ್ರ ಕರಗಲೇ ಇಲ್ಲ.

### ಪ್ರಿಯಕರನ ಜತೆ ಪಲ್ಲವಿಯ ಸರಳ ವಿವಾಹ

ನಗರದ ಎಂ.ಜಿ. ರಸ್ತೆಯ ಶ್ರೀ ಆದಿಚುಂಚನಗಿರಿ ಕಲ್ಯಾಣಮಂಟಪಕ್ಕೆ ಹೊಂದಿಕೊಂಡಿರುವ ಶ್ರೀ ಮಠದ ಆವರಣದಲ್ಲಿನ ಗಣಪತಿ ದೇವಾಲಯದಲ್ಲಿ ಶುಕ್ರವಾರ ರಾತ್ರಿ ಪಲ್ಲವಿ ಪ್ರಿಯಕರನ ಕೈ ಹಿಡಿದಳು.

ಬೆಳಗ್ಗೆ ಕಡೇ ಗಳಿಗೆಯಲ್ಲಿ ಮದುವೆ ಮುರಿದುಬಿದ್ದ ಪ್ರಕರಣದ ಬಳಿಕ, ಪಲ್ಲವಿ ತನ್ನ ಪ್ರಿಯಕರ ರಘುನೊಂದಿಗೆ ಎರಡು ಕುಟುಂಬಸ್ಥರ ಸಮ್ಮುಖದಲ್ಲಿ ವಿವಾಹವಾದಳು.

ಹಾಸನ ತಾಲ್ಲೂಕಿನ ಬಸವನಹಳ್ಳಿ ಗ್ರಾಮದವನಾದ ರಘು, ಟ್ರಾನ್ಸ್ ಪೋರ್ಟ್ ವ್ಯವಹಾರದಲ್ಲಿ ತೊಡಗಿದ್ದಾನೆ. ಪೋಷಕರ ಸಮ್ಮತಿಯೊಂದಿಗೆ ಗಣಪತಿ ದೇವಾಲಯದಲ್ಲಿ ನಡೆದ ಈ ವಿವಾಹದಲ್ಲಿ ರಘು ತನ್ನ ಪ್ರಿಯತಮೆ ಪಲ್ಲವಿಗೆ ತಾಳಿ ಕಟ್ಟಿದನು. ಎರಡೂ ಕುಟುಂಬದವರ ಉಪಸ್ಥಿತಿಯಲ್ಲಿ ಮದುವೆ ನೆರವೇರಿತು.



# ಕಾಡಾನೆ ಶಾಶ್ವತ ಪರಿಹಾರಕ್ಕೆ ವೈಜ್ಞಾನಿಕವಾಗಿ ಚಿಂತಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ : ಮಲೆನಾಡಿನಲ್ಲಿ ಕಾಡುಪ್ರಾಣಿಗಳಿಂದ ಸಂಭವಿಸುತ್ತಿರುವ ಪ್ರಾಣ ಹಾನಿ ಮತ್ತು ಬೆಳೆ ಹಾನಿ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಹಾಗೂ ಅರಣ್ಯ ಇಲಾಖೆ ವೈಜ್ಞಾನಿಕ ಪ್ರಯೋಗಗಳ ಬಗ್ಗೆ ಚಿಂತಿಸಬೇಕಿದೆ ಹಾಸನ ಜಿಲ್ಲಾ ಕಾಂಗ್ರೆಸ್ ವಕ್ತಾರರು ಹಾಗೂ ಮಾಜಿ ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಡಿ.ಸಿ ಸಣ್ಣಸ್ವಾಮಿ ಮನವಿ ಮಾಡಿದ್ದಾರೆ.

ಪತ್ರಿಕಾ ಹೇಳೀಕೆ ನೀಡಿರುವ ಅವರು, ಕಳೆದ ಎರಡು ದಶಕಗಳಿಂದ ಕಾಡು ಪ್ರಾಣಿಗಳ ಹಾವಳಿ ತೀವ್ರವಾಗಿದೆ. ನಿರಂತರ ದಾಳಿಯಿಂದ ಜೀವ ಹಾನಿ ಮತ್ತು ಬೆಳೆಹಾನಿ ಸಂಭವಿಸುತ್ತಲೆ ಇದೆ. ಇದು ಮುಗಿಯದ ಅಧ್ಯಾಯವಾಗಿದೆ. ಬೇಲೂರು ತಾಲ್ಲೂಕಿನ ಅಂಕಿಹಳ್ಳಿ ಗ್ರಾಮದಲ್ಲಿ ಶುಕ್ರವಾರ ಬೆಳಿಗ್ಗೆ ಕಾಡಾನೆ ದಾಳಿಗೆ ಕೂಲಿ ಕಾರ್ಮಿಕ ಮಹಿಳೆ ಸಾವನ್ನಪ್ಪಿದ್ದಾರೆ.

ಕಳೆದ ನಾಲ್ಕು ತಿಂಗಳಲ್ಲಿ ಆರು ಮಂದಿ ಕಾಡಾನೆ ದಾಳಿಗೆ ಕೂಲಿ ಕಾರ್ಮಿಕರು ಬಲಿಯಾಗಿರುವುದು ಮಲೆನಾಡಿಗರ ದುರಂತವೇ ಹೌದು ಎಂದು ಅಸಮಧಾನ ಹೊಸಹಾಕಿದ್ದಾರೆ.

ಕಾಡಾನೆ-ಮಾನವ ಸಂಘರ್ಷ ಕುರಿತು ಸಂಸತ್ತಿಲ್ಲಿ ಸಂಸದ ಶ್ರೇಯಸ್ ಪಟೇಲ್ ಧ್ವನಿ ಎತ್ತಿದರು ಕೇಂದ್ರ ಸರ್ಕಾರ ಈ ಕುರಿತು ಮಲತಾಯಿ ಧೋರಣೆ ತೋರಿದೆ. ಪ್ರಾಣ ಹಾನಿಗೆ ಚೆಕ್ ನೀಡುವುದು ಒಂದೇ ಪರಿಹಾರ ಎಂಬಂತೆ ಮೃತರ ಕುಟುಂಬಕ್ಕೆ ಚೆಕ್ ನೀಡಿ ಜನಪ್ರತಿನಿಧಿಗಳು, ಅರಣ್ಯ ಇಲಾಖೆ ಪ್ರಚಾರ ಪಡೆದುಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿದ್ದಾರೆ. ಕಾಡಾನೆ ಶಾಸ್ವತ ಪರಿಹಾರಕ್ಕೆ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಬೀದಿಗಿಳಿದು ಚಳುವಳಿ ಆರಂಭಿಸಬೇಕಿದೆ ಎಂದು ಆಗ್ರಹಿಸಿರುವ ಅವರು, ಮುಂದಿನ ದಿನಗಳಲ್ಲಿ ಸಾರ್ವಜನಿಕರ ಜೊತೆ ಜನಪ್ರತಿನಿಧಿಗಳ ವಿರುದ್ಧ ಚಳುವಳಿ ಆರಂಬಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕಾಫಿತೋಟದಲ್ಲಿ ಕೂಲಿ ಕಾರ್ಮಿಕರು ಪ್ರಾಣಭಯದಲ್ಲಿ ಕೆಲಸ ಮಾಡುತ್ತ ಜೀವನ ಸಾಗಿಸುತ್ತಿರುವುದು ನಿಜಕ್ಕೂ ದೊಡ್ಡ ದುರಂತ. ದಿನನಿತ್ಯ ಕಾಡಾನೆ ಸೇರಿದಂತೆ ಕಾಡುಪ್ರಾಣಿಗಳು ಬೆಳೆಗಳ ಮೇಲೆ, ಹಾಗೂ ಕೂಲಿ ಕಾರ್ಮಿರಕರ ಮೇಲೆ ದಾಳಿ ಪ್ರಕರಣಗಳು ನಡೆಯುತ್ತಲೆ. ಇಂತಹ ಘಟನೆಯಿಂದ ತೀವ್ರ ಆಘಾತಕ್ಕೊಳಗುತ್ತಿರುವ ಸ್ಥಳೀಯರು ಮತ್ತು ಕೆಲಸಗಾರರಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ. ಕೇಂದ್ರ ಸರ್ಕಾರ, ಅರಣ್ಯ ಇಲಾಖೆ, ಜನ ಪ್ರತಿನಿಧಿಗಳು ಕಾಡಾನೆ-ಮಾನವ ಸಂಘರ್ಷ ಪರಿಹಾರಕ್ಕೆ ವೈಜ್ಞಾನಿಕವಾಗಿ ಚಿಂತಿಸಿ ಸೂಕ್ತ ಕ್ರಮಕೈಗೊಳ್ಳಲು ಮುಂದಾಗಬೇಕಿದೆ ಎಂದು ಮನವಿ ಮಾಡಿದ್ದಾರೆ.

## ಜೂನ್ 4ರಂದು ಬೇಲೂರು ಪುರಭೆಯ ವಿಶೇಷ ಸಾಮಾನ್ಯ ಸಭೆ : ಹೆಚ್ಚಿದ ಕುತೂಹಲ

# ಅಧ್ಯಕ್ಷ ಅಶೋಕ್ ವಿರುದ್ಧ ಅವಿಶ್ವಾಸ ಅಸ್ತ್ರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಪಟ್ಟಣ ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್ ವಿರುದ್ಧ ಸ್ವಪಕ್ಷೀಯರೇ ಮತ್ತೊಮ್ಮೆ ಅವಿಶ್ವಾಸ ನಿರ್ಣಯ ಮಂಡಿಸಲು ಮುಂದಾಗಿದ್ದು, ಜೂನ್ 4ರಂದು ವಿಶೇಷ ಸಭೆ ಇರುವುದಾಗಿ ಮುಖ್ಯಾಧಿಕಾರಿ ಸುಜಯ್ ಕುಮಾರ್, ಸದಸ್ಯರಿಗೆ ಆಹ್ವಾನ ಪತ್ರ ನೀಡಿದ್ದಾರೆ.

ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಸೂಚನೆಯ ಮೇರೆಗೆ ಎ.ಆರ್. ಅಶೋಕ್ ಪದಚ್ಯುತಿಗೊಳಿಸಲು ಕಾಂಗ್ರೆಸ್ ತಾಲ್ಲೂಕು ಘಟಕವು ಮುಂದಾಗಿದೆ. ಉಪಾಧ್ಯಕ್ಷೆ ಉಷಾ ಅಧ್ಯಕ್ಷತೆಯಲ್ಲಿ ಅವಿಶ್ವಾಸ ನಿರ್ಣಯ ಸಭೆ ಕರೆಯಲಾಗಿದ್ದು, ಪುರಸಭೆಯ ಮೂರನೇ ಒಂದರಷ್ಟು ಸದಸ್ಯರು ಸಹಿ ಮಾಡಿ ಮನವಿ ಸಲ್ಲಿಸಿರುವುದರಿಂದ ಈ ಸಭೆ ಕರೆಯಲಾಗಿದೆ ಎಂದು ಆಹ್ವಾನ ಪತ್ರದಲ್ಲಿ ತಿಳಿಸಲಾಗಿದೆ.



ಈ ಮಧ್ಯೆ ಆಪ್ತರು ಹಾಗೂ ಕಾನೂನು ತಜ್ಞರ ಜೊತೆಗೆ ಸಮಾಲೋಚನೆ ನಡೆಸಿರುವ ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್, ನ್ಯಾಯಾಲಯದ ಮೊರೆ ಹೋಗಿ ಸಭೆಗೆ ತಡೆಯಾಜ್ಞೆ ತರಲು ನಿರ್ಧರಿಸಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಒಪ್ಪಂದದಂತೆ ನಿಗದಿತ ಸಮಯದಲ್ಲಿ ಎ.ಆರ್.ಅಶೋಕ್ ರಾಜೀನಾಮೆ ನೀಡಿಲ್ಲ, ನೀಡಲೂ ಒಪ್ಪುತ್ತಿಲ್ಲ ಎಂದು ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ಮಾಡಲು ಕಾಂಗ್ರೆಸ್ ನಿರ್ಧರಿಸಿದೆ. ಅದರಂತೆ ಮೇ 2 ರಂದು ಮೊದಲ ಬಾರಿ ಸಭೆ ಕರೆಯಲಾಗಿತ್ತು. ಕೆಲ ಕಾಂಗ್ರೆಸ್ ಸದಸ್ಯರೇ ಗೊಂದಲ ಸೃಷ್ಟಿಸಿದ್ದರಿಂದ ಸಭೆಯನ್ನು ಮುಂದೂಡಲಾಗಿತ್ತು.

ಶಾಸಕ ಎಚ್.ಕೆ.ಸುರೇಶ್, ಎ.ಆರ್. ಅಶೋಕ್ ಪರವಾಗಿ ನಿಂತು ಜೆಡಿಎಸ್‌ನ 5, ಬಿಜೆಪಿಯ ಒಬ್ಬ ಸದಸ್ಯರನ್ನು ಜೊತೆಯಲ್ಲಿಯೇ ಸಭೆಗೆ ಕರೆದುಕೊಂಡು ಬಂದಿದ್ದರು.

ಅವಿಶ್ವಾಸ ನಿರ್ಣಯದಲ್ಲಿ ಎ.ಆರ್. ಅಶೋಕ್ ಜಯವಾಗಿದ್ದಾರೆ ಎಂದು ಪತ್ರ ನೀಡುವಂತೆ ಒತ್ತಾಯ ಮಾಡಿದ್ದರು.

ಆದರೆ, ಆಗ ಅಧ್ಯಕ್ಷತೆ ವಹಿಸಿದ್ದ ಉಪಾಧ್ಯಕ್ಷೆ ಉಷಾ ಅವರು ಸಭೆಯನ್ನು ಮುಂದೂಡಿರುವುದಾಗಿ ಹೇಳಿದ್ದರಿಂದ ಈಗ ಮತ್ತೊಮ್ಮೆ ಸಭೆ ಕರೆಯಲಾಗಿದೆ. ಈ ಸಭೆಯಲ್ಲಿ ಏನಾಗುತ್ತದೆ ಎಂಬ ಕುತೂಹಲ ಪಟ್ಟಣದ ಜನತೆಯಲ್ಲಿ ಮನೆ ಮಾಡಿದೆ.

ಮೇ 2 ರಂದು ನಡೆದ ಸಭೆಯ ವೇಳೆ ಎ.ಆರ್.ಅಶೋಕ್ ಜೊತೆ ಗುರುತಿಸಿಕೊಂಡಿದ್ದ ಕಾಂಗ್ರೆಸ್ ಸದಸ್ಯರಾದ ಜಮೀಲಾ, ದಿವ್ಯಾ, ಸೌಮ್ಯಾ, ಅಶೋಕ್ ನಾಯಕ್, ಪಕ್ಷ ವಿಪ್ ನೀಡಿದ್ದರೂ ಸಭೆಗೆ ಭಾರದೇ ಗೈರಾಗಿದ್ದರು. ಹೀಗಾಗಿ ಇವರನ್ನು ಸದಸ್ಯತ್ವದಿಂದ ಅನರ್ಹ ಮಾಡಲು ಪಕ್ಷ ಮುಂದಾಗಿದೆ ಎಂಬ ಮಾತುಗಳು ಕೇಳಿ ಬಂದಿದ್ದವು. ಇದೀಗ ಈ ನಾಲ್ವರು ಸದಸ್ಯರ ಮನಮೊಲಿಸುವಲ್ಲಿ ಪಕ್ಷದ ನಾಯಕರು ಯಶಸ್ವಿಯಾಗಿದ್ದು, ಅವಿಶ್ವಾಸ ನಿರ್ಣಯದ ಮನವಿ ಪತ್ರಕ್ಕೆ ಸಹಿ ಹಾಕಿದ್ದಾರೆ.

### ಹೆಚ್ಚುತ್ತಿರುವ ಲೆಕ್ಕಾಚಾರ

ಪುರಸಭೆಯು 23 ಸದಸ್ಯ ಬಲ ಹೊಂದಿದ್ದು ಕಾಂಗ್ರೆಸ್ 17 ಜೆಡಿಎಸ್ 5 ಬಿಜೆಪಿಯ 1 ಸದಸ್ಯರಿದ್ದಾರೆ. ಶಾಸಕ ಮತ್ತು ಸಂಸದರು ಮತ ಚಲಾವಣೆ ಮಾಡಬಹುದಾಗಿದೆ. ಕಾಂಗ್ರೆಸ್‌ನ 17 ಸದಸ್ಯರಲ್ಲಿ ಎ.ಆರ್.ಅಶೋಕ್ ಬಿಟ್ಟರೂ ಉಳಿದ 16 ಸದಸ್ಯರು ಸಂಸದರ ಒಂದು ಮತ ಅವಿಶ್ವಾಸ ನಿರ್ಣಯದ ಪರವಾಗಿ ಚಲಾವಣೆಯಾದರೆ ಎ.ಆರ್.ಅಶೋಕ್ ಅಧ್ಯಕ್ಷಸ್ಥಾನ ಕಳೆದುಕೊಳ್ಳಬೇಕಾಗುತ್ತದೆ ಎನ್ನುವ ಮಾತುಗಳು ಕೇಳಿ ಬರುತ್ತಿವೆ.



ಆಂತರಿಕ ಒಪ್ಪಂದದಂತೆ ನಡೆದುಕೊಳ್ಳದೇ ವಿರೋಧ ಪಕ್ಷದವರ ಜೊತೆ ಸೇರಿ ಅಶೋಕ್ ಪಕ್ಷಕ್ಕೆ ದ್ರೋಹ ಎಸಗಿದ್ದಾರೆ. ಅಶೋಕ್ ವಿರುದ್ಧ ಮತ ಚಲಾಯಿಸುವಂತೆ ಪಕ್ಷದ ಸದಸ್ಯರಿಗೆ ವಿಪ್ ನೀಡಲಾಗುತ್ತದೆ

**- ಎಂ.ಜೆ. ನಿಶಾಂತ್**
**ಕಾಂಗ್ರೆಸ್ ತಾಲ್ಲೂಕು ಘಟಕದ ಅಧ್ಯಕ್ಷ**



25 ವರ್ಷಗಳಿಂದ ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದಿದ್ದೇನೆ. ಆದರೆ ಈಗ ನನ್ನ ವಿರುದ್ಧ ಷಡ್ಯಂತ್ರ ಮಾಡುತ್ತಿರುವುದು ಬೇಸರ ತಂದಿದೆ. ಪಟ್ಟಣದ ಜನತೆಗಾಗಿ ಉತ್ತಮ ಕೆಲಸ ಮಾಡಿರುವ ತೃಪ್ತಿ ನನಗಿದೆ

**- ಎ.ಆರ್.ಅಶೋಕ್**
**ಪುರಸಭೆ ಅಧ್ಯಕ್ಷ**

## ಒತ್ತುವರಿ ಜಾಗ ತೆರವುಗೊಳಿಸಲು ತಹಸೀಲ್ದಾರ್ ಸೂಚನೆ

### ಪ್ರಶ್ನಿಸಿದ ಗ್ರಾಮಸ್ಥರ ಮೇಲೆ ಖಾರಪುಡಿ ಎರಚಿ ಹಲ್ಲೆ ನಡೆಸಿದ ಮಹಿಳೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಕಂದಾಯ ಇಲಾಖೆಯ ಲೋಪದಿಂದಾಗಿ ಗ್ರಾಮದ ಯುವಕರು ಊರು ತೊರೆಯುವಂತಾಗಿದೆ ಎಂದು ಬ್ಯಾಗಡಹಳ್ಳಿ ಗ್ರಾಮಸ್ಥರು ಆರೋಪಿಸಿದ್ದಾರೆ.

ಮಂಗಳವಾರ ಗ್ರಾಮದ ವೃತ್ತದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ ಬ್ಯಾಗಡಹಳ್ಳಿ ಗ್ರಾಮಸ್ಥರು ಮರಗತ್ತೂರು ಗ್ರಾಮದ ಸರ್ವೇ ನಂಬರ್ 16 ರಲ್ಲಿರುವ ಮೂರು ಎಕರೆ ಸರ್ಕಾರಿ ಭೂಮಿಯನ್ನು ಬ್ಯಾಗಡಹಳ್ಳಿ ಗ್ರಾಮದ ಉಪಯೋಗಕ್ಕಾಗಿ ಬಹು ಹಿಂದಿನಿಂದ ಮೀಸಲಿಡಲಾಗಿದೆ. ಆದರೆ , ಗ್ರಾಮದ ಗೌಡೆಗೌಡ ಎಂಬ ವ್ಯಕ್ತಿ ಕಳೆದ ಅರ್ಧ ದಶಕದ ಹಿಂದೆ ಈ ಸರ್ಕಾರಿ ಜಮೀನಿನಲ್ಲಿ ಸಣ್ಣದೊಂದು ಗುಡಿಸಿಲು ನಿರ್ಮಿಸಿಕೊಂಡು ವಾಸಿಸುತ್ತಿದ್ದರು. ದಿನಕಳದಂತೆ ಜಮೀನು ಒತ್ತುವರಿ ಮಾಡಲಾರಂಭಿಸಿದ್ದಾರೆ. ಈ ಬಗ್ಗೆ ಕಂದಾಯ ಇಲಾಖೆ ಹಾಗೂ ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗೆ ದೂರು ನೀಡಿ ಒತ್ತುವರಿ ತೆರವುಗೊಳಿಸುವಂತೆ ಮನವಿ ಮಾಡಿ ವರ್ಷ ಕಳೆದಿದೆ. ಆದರೆ, ಅಧಿಕಾರಿಗಳು ಒತ್ತುವರಿ ತೆರವುಗೊಳಿಸಲು ಯಾವುದೆ ಕ್ರಮ ಕೈಗೊಳ್ಳದ ಪರಿಣಾಮ ವ್ಯಕ್ತಿಯಿಂದ ವಾರದ ಹಿಂದೆ ಮತ್ತಷ್ಟು ಭೂಮಿ ಒತ್ತುವರಿ ಮಾಡಲಾರಂಭಿಸಿದ್ದರು. ಇದರಿಂದ ಸಿಟ್ಟಿಗೆದ್ದ ಗ್ರಾಮಸ್ಥರು ಒತ್ತುವರಿ ತೆರವುಗೊಳಿಸಿದ್ದಾರೆ. ಈ ವೇಳೆ ಒತ್ತುವರಿ ದಾರರಿಂದಲೇ ಗ್ರಾಮಸ್ಥರ ಮೇಲೆ ಖಾರಪುಡಿ ಎರಚಿ ಹಲ್ಲೆ ನಡೆಸಲಾಗಿದ್ದು ಈ ಬಗ್ಗೆ ವಿಡೀಯೊ ಚಿತ್ರಿಕರಣ ಸಹ ಲಭ್ಯವಿದೆ. ಆದರೂ ಪೋಲಿಸ್ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ರಾಜಕೀಯದ ಒತ್ತಡಕ್ಕೆ ಸಿಲುಕಿ ಗ್ರಾಮಸ್ಥರ ಮೇಲೆ ದೂರು ದಾಖಲಿಸಿರುವ ಪರಿಣಾಮ ಗ್ರಾಮದಲ್ಲಿ ಗಂಡಸರು ಊರು ತೊರೆಯುವಂತಾಗಿದೆ ಎಂದು ಆರೋಪಿಸಿದ ಮಹಿಳೆಯರು ಸ್ಥಳಕ್ಕೆ ತಹಸೀಲ್ದಾರ್ ಆಗಮಿಸ ಬೇಕು ಎಂದು ಪಟ್ಟು ಹಿಡಿದು ಪ್ರತಿಭಟಿಸಿದರು. ಈ ವೇಳೆ ಸ್ಥಳಕ್ಕಾಮಿಸಿದ ತಹಸೀಲ್ದಾರ್ ಅರವೀಂದ್ 94 ಸಿ ಅಡಿ ನೀಡಿರುವ ವಿಸ್ತೀರ್ಣಕ್ಕಿಂತ ಹೆಚ್ಚಿನ ಒತ್ತುವರಿ ಇದ್ದರೆ ತೆರವುಗೊಳಿಸಿ ಮುಂದೆ ಯಾವುದೆ ಒತ್ತುವರಿ ಮಾಡಿದರು ಕ್ರಮ ಕೈಗೊಳ್ಳಲಾಗುವುದು ಎಂಬ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂದೆ ಪಡೆಯಲಾಯಿತು.



ಈ ವೇಳೆ ಗ್ರಾಮಸ್ಥರಾದ ಪಾರ್ವತಿ,ರಾಧ,ನೇತ್ರಾ,ಜಯಂತಿ,ಜಾನಕಿ,ಮಧು, ಸುಬ್ರಹಮಣ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಚಿತ್ಕಲಾ ಫೌಂಡೇಶನ್(ರಿ), ಹಾಸನ
ಡಿಂಪನ ಎಸ್. ದೇಸಾಯಿ (3ವರ್ಷ 4 ತಿಂಗಳು) ಬಾಲ ಕಲಾವಿದೆ ಅವರ
ಪ್ರಥಮ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ
ದಿನಾಂಕ :25-05-2025 । ಭಾನುವಾರ । ಬೆಳಗ್ಗೆ 11.00 ರಿಂದ
ಸ್ಥಳ: ಕಲಾಶ್ರೀ ಗ್ಯಾಲರಿ, ವಿದ್ಯಾನಗರ, ಹಾಸನ
ಪ್ರದರ್ಶನ ಉದ್ಘಾಟನೆ : ರೂಪ ಹಾಸನ, ಕವಯಿತ್ರಿ ಹಾಗೂ ಸಾಮಾಜಿಕ ಹೋರಾಟಗಾರ್ತಿ
ಅಧ್ಯಕ್ಷತೆ : ಬಿ.ಎಸ್. ದೇಸಾಯಿ, ಹಿರಿಯ ಚಿತ್ರ ಕಲಾವಿದರು ಹಾಗೂ ಸಂಸ್ಥಾಪಕ ಅಧ್ಯಕ್ಷರು ಚಿತ್ಕಲಾ ಫೌಂಡೇಶನ್
ಮುಖ್ಯ ಅತಿಥಿಗಳು : ಮಂಜುನಾಥ್ ಹೆಚ್. ಎಸ್., ಚಿತ್ರ ಕಲಾವಿದರು ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯರು
ಗಿರಿಜಾ ದಿನಕರ್, ಲೇಖಕರು ಹಾಗೂ ಶಿಕ್ಷಕರು

ಚಿತ್ರಕಲಾ ಪ್ರದರ್ಶನ ದಿನಾಂಕ 25-05-2025 ರಿಂದ 31-05-2025 ರವರೆಗೆ ಬೆಳಗ್ಗೆ 10ರಿಂದ ಸಂಜೆ 7ಗಂಟೆಯವರೆಗೆ ತೆರೆದಿರುತ್ತದೆ

## ನೆಟ್‌ಬಾಲ್ ಚಾಂಪಿಯನ್ ಶಿಪ್‌ಗೆ ವಿದ್ಯಾರ್ಥಿ ಆಯ್ಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: 31ನೇ ಸಬ್-ಜೂನಿಯರ್ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್ ಶಿಪ್ 2025-26 ರಲ್ಲಿ ಕರ್ನಾಟಕ ತಂಡಕ್ಕೆ ಆಯ್ಕೆಯಾದ ಜಿಲ್ಲೆಯ ಆಲೂರಿನ ಮನ್ಸೂರ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಸೈಯದ್ ಸಾದತ್ ಅವರಿಗೆ ಅನೇಕರು ಅಭಿನಂದನೆ ಸಲ್ಲಿಸಿದ್ದಾರೆ. ಚಾಂಪಿಯನ್‌ಶಿಪ್ ಮೇ 25 ರಿಂದ 28 ರವರೆಗೆ ಮಧ್ಯಪ್ರದೇಶದಲ್ಲಿ ನಡೆಯಲಿದೆ. ದೈಹಿಕ ಶಿಕ್ಷಕ ಸೈಯದ್ ತೌಕೀರ್ ಅಹಮದ್ ಅವರ ಮಾರ್ಗದರ್ಶನದಲ್ಲಿ ಸೈಯದ್ ಸ್ಪರ್ಧೆಗೆ ಆಯ್ಕೆಯಾಗಿದ್ದು, ಗೆದ್ದು ಬಾ ಎಂದು ಆಡಳಿತ ಮಂಡಳಿ, ಪ್ರಾಂಶುಪಾಲರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸೇರಿದಂತೆ ಇಡೀ ಮನ್ಸೂರ ಶಾಲಾ ಸಮುದಾಯ ಸೈಯದ್ ಸಾದತ್ ಮತ್ತು ಕರ್ನಾಟಕ ನೆಟ್‌ಬಾಲ್ ತಂಡಕ್ಕೆ ಶುಭ ಹಾರೈಸಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಮೇ -24

1. 1999-ಕಾರ್ಗಿಲ್ ಯುದ್ಧ ಆರಂಭದ ಮೊದಲ ಘಟ್ಟಗಳು:

ಪಾಕಿಸ್ತಾನದ ಸೇನೆ ಹಾಗೂ ಉಗ್ರರು ಲಡ್ಡಾಖ್‌ನ ಕಾರ್ಗಿಲ್ ಸೆಕ್ಟರ್‌ನಲ್ಲಿ ಗೂಢಚಟುವಟಿಕೆ ನಡೆಸುತ್ತಿದ್ದರೆಂದು ಭಾರತೀಯ ಸೇನೆಗೆ ಖಚಿತವಾಯಿತು. ಇದರಿಂದ 1999ರ ಕಾರ್ಗಿಲ್ ಯುದ್ಧದ ಶುರುವಾದ ಮೊದಲ ಲಕ್ಷಣಗಳು ಕಾಣಿಸಿಕೊಂಡವು.

2. 1986-ಇಂಡಿಯನ್ ಈಕ್ವಿಟಿ ಮಾರುಕಟ್ಟೆಯಲ್ಲಿ ಕಂಪ್ಯೂಟರೀಕರಣ ಪ್ರಾರಂಭ:

ಬಾಂಬೆ ಸ್ಟಾಕ್ ಎಕ್ಸ್ ಚೇಂಜ್ (@C) ನಲ್ಲಿ ಮೊದಲ ಬಾರಿ ಕಂಪ್ಯೂಟರೀಕೃತ ವ್ಯವಹಾರ ಪ್ರಾರಂಭವಾಯಿತು, ಇದು ಭಾರತದ ಬಂಡವಾಳ ಮಾರುಕಟ್ಟೆಯ ಇತಿಹಾಸದಲ್ಲಿ ಮಹತ್ವದ ಘಟ್ಟವಾಗಿದೆ.

3. 2001-ಶಾರದಾ ಪೀಠದ ಶಂಕರಾಚಾರ್ಯರಾಗಿ ಸ್ವಾಮಿ ಸ್ವರೂಪಾನಂದ ಸರಸ್ವತಿಗಳ ಪದಗ್ರಹಣ:

#### ಜನ್ಮ ದಿನಗಳು

1. ರಾಜೀವ್ ಚಂದ್ರಶೇಖರ್ (1964): ಉದ್ಯಮಿ ಮತ್ತು ರಾಜಕಾರಣಿ.

2. ಕಿರಣ್ ಬೇಡಿ(1949):

ಭಾರತದ ಪ್ರಥಮ ಮಹಿಳಾ ಐಪಿಎಸ್ ಅಧಿಕಾರಿ. ಸಾಮಾಜಿಕ ಕಾರ್ಯಕರ್ತೆಯಾಗಿ, ನಂತರ ಪುಡಿಚೇರಿ ಲೆಫ್ಟಿನೆಂಟ್ ಗವರ್ನರ್ ಆಗಿ ಸೇವೆ ಸಲ್ಲಿಸಿದರು.

#### ಪುಣ್ಯ ತಿಥಿಗಳು (ಮರಣ ದಿನಗಳು):

1. (1995)-ಭಾರತದ 4ನೇ ಪ್ರಧಾನಮಂತ್ರಿ. 1977ರಿಂದ 1979ರವರೆಗೆ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದರು. ಆನೇಕ ನೈತಿಕ ಮೌಲ್ಯಗಳ ಅನುಯಾಯಿ.


# ಜೀವನವೇ ಯೋಗವಾಗಬೇಕು

ಚೇತನ್ ಗುರೂಜಿ
ಬಸವ ಯೋಗಕೇಂದ್ರ, ಅಡಗೂರು

ಯೋಗವೇ ಜೀವನವಾಗಬಾರದು, ಜೀವನವೇ ಯೋಗವಾಗಬೇಕು ಆಗ ಮಾತ್ರವೇ ಬದುಕು ಸುಂದರ ಮತ್ತು ಆನಂದಮಯವಾಗಲು ಸಾಧ್ಯವಾಗುತ್ತದೆ. ಅಂದರೆ ದಿನನಿತ್ಯದ ಒಂದು ಗಂಟೆ ಯೋಗ ಮಾಡುವುದರಿಂದ ಒಂದಿಷ್ಟು ದೈಹಿಕ ಸಮಸ್ಯೆಗಳಿಗೆ ಪರಿಹಾರ ಸಿಗಬಹುದು. ಜೀವನವೇ ಯೋಗವಾದರೆ ಎಲ್ಲಾ ತೊಂದರೆ ತಾಪತ್ರಯಗಳಿಂದ ದೂರವಿರಲು ಅನುಕೂಲವನ್ನು ಮಾಡಿಕೊಡುತ್ತದೆ.

ಪತಂಜಲಿ ಮಹರ್ಷಿಗಳು ತಮ್ಮ 194 ಸೂತ್ರಗಳಲ್ಲಿ ತಿಳಿಸಿರುವುದು ಇದನ್ನೇ . ಒಂದು ಸೂತ್ರದಲ್ಲಿ ಹೀಗೆ ಹೇಳುತ್ತಾರೆ ಯೋಗಾ: ಚಿತ್ತ ವೃತ್ತಿ ನಿರೋಧ: ಯೋಗವೆಂದರೆ ಬರೀ ಆಸನಗಳಲ್ಲ ಮನಸ್ಸಿನ ಆಸೆಗಳ ಭಾರವನ್ನು ಕಡಿಮೆ ಮಾಡಿಕೊಳ್ಳುವುದೇ ಯೋಗವೆಂದು ಹೇಳಿದ್ದಾರೆ ಹೀಗೆ ಇನ್ನೊಂದು ಸೂತ್ರದಲ್ಲಿ ಆಸನವೆಂದರೆ ಸ್ಥಿರಂ ಸುಖಂ ಆಸನಂ ನಿನಗೆ ಯಾವ ಆಸನ ಸುಖವೆನಿಸುತ್ತದೋ ಅದುವೇ ಯೋಗಾಸನ ವೆಂದು ಹೇಳಿರುತ್ತಾರೆ. ನಾವಿಂದು ಯೋಗವೆಂದರೆ ಬರೀ ರೋಗವನ್ನು ಗುಣಪಡಿಸುವ ಮಾಧ್ಯಮವನ್ನಾಗಿ ಬಳಸಿ ಕೊಳ್ಳುತ್ತಿದ್ದೇವೆ. ಇದು ಒಂದು ಜೀವನದ ಭಾಗವೆಂದು ತಿಳಿದು ಮುನ್ನಡೆದರೆ ಆಗುವ ಪರಮಾನಂದವೇ ಬೇರೆ ಅಂತಹ ಜೀವನವನ್ನೇ ಯೋಗ ಮಾಡಿಕೊಂಡ ಅನೇಕ ಮಹಾತ್ಮರನ್ನು ಸಾಧಕರನ್ನು ನಮ್ಮ ದೇಶದಲ್ಲಿ ಬಹಳಷ್ಟು ಕಾಣಬಹುದು ಅಂತವರಲ್ಲಿ ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ರಾಮತೀರ್ಥರು, ರಾಮದಾಸರು, ಏಕನಾಥರು, ಚೈತನ್ಯ ಪ್ರಭುಗಳು, ರಮಣ ಮಹರ್ಷಿಗಳು, ಅರವಿಂದರು, ತುಳಸಿದಾಸರು, ನಾಮದೇವರು, ನಾವು ಕಂಡಂತ ಕರ್ನಾಟಕದ ನಡೆದಾಡುವ ದೇವರು ಪರಮಪೂಜ್ಯ ಸಿದ್ದಗಂಗಾ ಮಹಾಸ್ವಾಮೀಜಿಯವರು, ಶ್ರೀ ಸಿದ್ದೇಶ್ವರ ಮಹಾ ಸ್ವಾಮೀಜಿಯವರು ರಾಜಕೀಯದಲ್ಲಿದ್ದು ರಾಜಕೀಯವನ್ನು ಹೆಚ್ಚು ಅಂಟಿಸಿಕೊಳ್ಳದೆ ಬದುಕಿದ ಲಾಲ್ ಬಹದ್ದೂರ್ ಶಾಸ್ತ್ರಿಯವರು ಹಾಗೆ ಡಾ, ಅಬ್ದುಲ್ ಕಲಾಂ ಹೀಗೆ ದೊಡ್ಡ ಪಟ್ಟಿಯನ್ನು ಮಾಡಬಹುದು ಇವರೆಲ್ಲರೂ ಜೀವನವನ್ನೇ ಯೋಗ ಮಾಡಿಕೊಂಡು ಬದುಕಿ ಸಮಾಜಕ್ಕೆ ತಮ್ಮ ಬದುಕನ್ನೇ ಸಂದೇಶವನ್ನಾಗಿ ಸದಾ ನೆನಪಿನಲ್ಲಿ ಉಳಿಯುವಂತೆ ಮಾಡಿರುತ್ತಾರೆ. ಜೀವನವೇ ಯೋಗವೆಂದಾದರೆ ಪ್ರತಿಕ್ಷಣವೂ ಯೋಗವಿದ್ದಂತೆ ನಾವಿಂದು ಕೇವಲ ಒಂದಿಷ್ಟು ಸಮಯ ಕೆಲವೊಂದಿಷ್ಟು ಆಸನಗಳು ಮತ್ತು ಪ್ರಾಣಾಯಾಮಗಳನ್ನು ಮಾಡಿಕೊಂಡು ಯೋಗ ಮಾರ್ಗದಲ್ಲಿ ಇದ್ದೇವೆ ಎಂದು ಹೇಳುತ್ತಾ ಹೋಗುತ್ತಿದ್ದೇವೆ ಅವರು ಯಾವತ್ತೂ ಸಹ ಈ ಮಾತನ್ನು ತಿಳಿಸಲೇ ಇಲ್ಲ ಅದಕ್ಕಾಗಿ ಅವರು ನೆನಪಿನಲ್ಲಿ ಉಳಿಯುತ್ತಾರೆ ನಾವುಗಳು ಮರೆಯಾಗುತ್ತೇವೆ ಕಾರಣ ಬರೀ ಯೋಗವೆಂದರೆ ಆಸನಗಳಷ್ಟೇ ಅಲ್ಲ ಎಂಬ ಸತ್ಯ ನಮಗೆ ಅರ್ಥವಾಗಬೇಕು ಇಲ್ಲವಾದರೆ ಅದು ಒಂದು ದೇಹದ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ಭಾಗವಾಗಿ ಮಾತ್ರವೇ ಉಳಿದುಬಿಡುತ್ತದೆ. ಇತ್ತೀಚಿನ ನಾಗರಿಕ ಸಮಾಜ ನಿಮ್ಮ ರೋಗಗಳು ಬರದಂತೆ ತಡೆಗಟ್ಟಲು ಮತ್ತು ಬಂದಿದ್ದರೆ ವಾಸಿ ಮಾಡಿಕೊಳ್ಳಲು ಯೋಗವನ್ನು ತಪ್ಪದೇ ದಿನನಿತ್ಯ ಒಂದು ಗಂಟೆ ಮಾಡಿ ಎಂದು ಹೇಳುತ್ತಿರುವುದನ್ನು ಕೇಳುತ್ತಿದ್ದೇವೆ ಅದರಂತೆ ಅನುಸರಿಸುತ್ತಾ ರೋಗಗಳನ್ನು ಗುಣಪಡಿಸಿಕೊಂಡಿರಬಹುದು. ಇದರಿಂದ ವೈಯಕ್ತಿಕವಾಗಿ ಅಷ್ಟೇ ಲಾಭ ಬಿಟ್ಟರೆ ಮತ್ತೇನಿಲ್ಲ.

ದೇಹದ ಆರೋಗ್ಯ ಸುಧಾರಿಸಿಕೊಂಡರು ಮಾನಸಿಕ ಒತ್ತಡಗಳಿಂದ ಹೊರಬರಲು ಸಾಧ್ಯವಾಗುವುದು ಕಷ್ಟವಾಗಬಹುದು. ನಾವು ತಿಳಿದುಕೊಂಡಿರುವುದು ಯೋಗ ರೋಗವನ್ನು ದೂರ ಮಾಡಿಕೊಳ್ಳಲು ಇರುವ ಸಾಧನವಷ್ಟೇ ಎಂದು ತಿಳಿದುಕೊಂಡು ಅಲ್ಲಿಂದ ಮುಂದೆ ಸಾಗುವ ದಾರಿಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿಲ್ಲ ಅಂದರೆ ಸನ್ಮಾರ್ಗದ ದಾರಿಯಲ್ಲಿ ನಡೆಯಲು ಯೋಗ ಮೊದಲನೇ ಮೆಟ್ಟಿಲು ಮಾಡಿಕೊಂಡು ನಂತರದಲ್ಲಿ ಒಂದೊಂದೇ ಬದಲಾವಣೆಗಳನ್ನು ತಂದುಕೊಳ್ಳುತ್ತಾ ಜೀವನವನ್ನು ಯೋಗ ಮಾಡಿಕೊಳ್ಳುವ ದಾರಿಯಲ್ಲಿ ಮುನ್ನಡೆಯಲು ಸಹಾಯ ಮಾಡುತ್ತದೆ. ನಾವುಗಳು ಬರೀ ಯೋಗಾಸನಗಳು ಪ್ರಾಣಾಯಾಮಗಳನ್ನು ಮಾಡುತ್ತಲೇ ದಿನಗಳನ್ನು



ಕಳೆಯುತ್ತಿದ್ದೇವೆ ಹೊರತು ಮುಂದಿನ ಹಂತಕ್ಕೆ ಹೋಗಲು ಪ್ರಯತ್ನವನ್ನು ಸಹ ಮಾಡುತ್ತಿಲ್ಲ. ಮುಂದಿನ ಹಂತಕ್ಕೆ ಹೆಜ್ಜೆ ಇಟ್ಟರೆ ಅದರ ಸವಿಯನ್ನ ಅನುಭವಿಸುತ್ತಾ ಇನ್ನೊಬ್ಬರಿಗೂ ಹಂಚಲು ಶುರು ಮಾಡುತ್ತೇವೆ. ಈಗ ಬಹಳಷ್ಟು ಜನರಿಗೆ ಜೀವನವೇ ಯೋಗವೆಂದರೆ ಏನು ಎಂಬ ಪ್ರಶ್ನೆ ಮೂಡುವುದು ಸಹಜ. ದಿನದ 24 ಗಂಟೆಯಲ್ಲಿ ಒಂದು ಗಂಟೆ ಯೋಗಾಸನ ಮಾಡಿದರೆ ಮುಗಿದು ಹೋಯಿತು ಎಲ್ಲಾ ಸಿದ್ಧಿಗಳು ಲಭಿಸಿದಂತೆ ಎನ್ನುವ ಭ್ರಮಲೋಕದಲ್ಲಿ ನಾವಿದ್ದೇವೆ ಖಂಡಿತ ಅದು ಸಾಧ್ಯವೇ ಹಾಗಾಗಿದ್ದರೆ ಎಲ್ಲರೂ ಪ್ರತಿನಿತ್ಯ ಒಂದು ಗಂಟೆ ಯೋಗ ಅಭ್ಯಾಸ ಮಾಡಿ ಸಿದ್ಧಿಯನ್ನು ಪಡೆದುಕೊಳ್ಳುತ್ತಿದ್ದರು. ಅದು ಸಾಧ್ಯವಾಗುವುದಿಲ್ಲ ಎಂದು ತಿಳಿದೇ ಜನರು ಸುಮ್ಮನಿದ್ದಾರೆ ಹಾಗಾದರೆ ಏನು ಮಾಡಬೇಕು ಎಂದರೆ ಉಳಿದ 23 ಗಂಟೆಯೂ ಸಹ ಯೋಗವೆಂದು ಭಾವಿಸಿದಾಗ ಆಗುವ ಪರಿಣಾಮಗಳೇ ಬೇರೆ ಅಂದರೆ ಅರ್ಥ ಪೂಜೆ ಮಾಡುವಾಗ, ಆಹಾರ ತಯಾರಿಸುವ ಮತ್ತು ಸೇವಿಸುವ, ಕೆಲಸ ಮಾಡುವಾಗ, ಮಾತನಾಡುವ ಸಂದರ್ಭ ಮಲಗಿಕೊಂಡಾಗ ಹೀಗೆ ಪ್ರತಿ ಸಮಯವು ಸಹ ಯೋಗವೆಂದು ಭಾವಿಸಿ ಮುನ್ನಡೆದಾಗ ಎಲ್ಲವೂ ತಾನಾಗೆ ಸಿದ್ಧಿಸುತ್ತದೆ ಅಂತಹ ಜೀವನವನ್ನೇ ಯೋಗ ಮಾಡಿಕೊಂಡಿದ್ದರ ಫಲವಾಗಿನೇ ಅವರ ಸ್ಮರಣೆಯನ್ನು ಇಂದಿಗೂ ನಾವು ಮಾಡಲು ಸಾಧ್ಯವಾಗಿದ್ದು.

ಜೀವನವೇ ಯೋಗವೆಂದರೆ ಏನು ಎಂದು ಸಿದ್ದರಾಮೇಶ್ವರರು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ ಒಬ್ಬರ ಮನೆಯ ಘಾತವ ಮಾಡಿ, ಒಬ್ಬರ ಮನವನ್ನು ನೋಯಿಸಿ, ಗಂಗೆಯಲ್ಲಿ ಮುಳುಗಿದಡೆ ಏನಾಗುವುದಯ್ಯ, ಚಂದ್ರ ಗಂಗೆಯ ತಡಿಯಲಿದ್ದಡೇನು, ಕಳಂಕ ಬಿಡದಾಯಿತು. ಇದು ಕಾರಣ

ಒಬ್ಬರ ಮನೆಯ ಘಾತವ ಮಾಡದವ, ಒಬ್ಬರ ಮನವ ನೋಯಿಸದವ, ಪರಮ ಪಾವನ ನೋಡ ಕಪಿಲಸಿದ್ದ ಮಲ್ಲಿಕಾರ್ಜುನ.

ಒಬ್ಬರ ಮನಸ್ಸನ್ನು ನೋಯಿಸಿ ಇನ್ನೊಬ್ಬರ ಮನೆಯನ್ನು ಹಾಳು ಮಾಡಿ ಯಾವುದೇ ಪೂಜೆ, ಯೋಗ, ಧ್ಯಾನ ಮಾಡಿದರು ಪ್ರಯೋಜನವಿಲ್ಲ ಅದೇ ಇನ್ನೊಬ್ಬರಿಗೆ ತೊಂದರೆ ಕೊಡದೆ ಮತ್ತೊಬ್ಬರ ಮನೆಯ ಸಂಸಾರವನ್ನು ಕೆಡಿಸದೆ ಬದುಕುತ್ತೀವಲ್ಲ ಅದೇ ಜೀವನ ಯೋಗ.

ಇಂತಹ ವಿಚಾರಗಳನ್ನು ಯೋಗ ತರಗತಿಗಳಲ್ಲಿ ತಿಳಿಸುವುದನ್ನು ಮಾಡಬೇಕು. ಬರೀ ಯೋಗ ಮಾಡಿ ಪ್ರಾಣಾಯಾಮ ಮಾಡಿದರೆ ಸಾಕು ನಂತರ ಒಂದಿಷ್ಟು ಹಣ್ಣು ತರಕಾರಿಗಳನ್ನ ತಿಂದುಬಿಡಿ ಅಲ್ಲಿಗೆ ನೀವು ಆರೋಗ್ಯದಿಂದಿರುತ್ತೀರಿ ಎಂದು ಹೇಳುತ್ತಾ ಹೋದರೆ ಅಷ್ಟು ಪ್ರಯೋಜನವಾಗುವುದಿಲ್ಲ ಅಂದರೆ ಮಾತಿನಿಂದಲೂ ಯಾರಿಗೂ ನೋವಾಗಬಾರದು , ಕಿವಿಯಿಂದ ಕೇಳಿಸಿಕೊಳ್ಳುವುದು ಒಳ್ಳೆಯದಿರಬೇಕು ಕಣ್ಣಿನಿಂದ ನೋಡುವ ನೋಟ ಚೆನ್ನಾಗಿರಬೇಕು ಚರ್ಮದಿಂದ ಸ್ಪರ್ಶಿಸುವುದು ಸಹ ಒಳ್ಳೆಯದಿರಬೇಕು ಮೂಗಿನಿಂದ ತೆಗೆದುಕೊಳ್ಳುವಂತಹ ವಾಸನೆಯೂ ಸಹ ಒಳ್ಳೆಯದನ್ನೇ ಹುಡುಕಬೇಕು ಆಗ ಜೀವನ ಬೇರೆ ರೀತಿಯ ಅನುಭವವನ್ನು ಕೊಡುತ್ತದೆ ಅಂದರೆ ಹಣ್ಣುಗಳನ್ನು ಮೊಳಕೆ ಕಾಳುಗಳನ್ನು ತಿಂದರೆ ಸಾಲುವುದಿಲ್ಲ ನಮ್ಮಲ್ಲಿ ಇನ್ನೊಬ್ಬರ ಬಗ್ಗೆ ಹೊಟ್ಟೆಕಿಚ್ಚಿರಬಾರದು ಹಾಗೆ ಹೃದಯದಲ್ಲಿ ಎಲ್ಲರ ಬಗ್ಗೆನೂ ಪ್ರೀತಿಯ ಭಾವನೆಯನ್ನು ಬೆಳೆಸಿಕೊಳ್ಳಬೇಕು ಜೊತೆಗೆ ತಲೆಯಲ್ಲಿ ಒಂದಿಷ್ಟು ಒಳ್ಳೆಯ ಆಲೋಚನೆಗಳು ಮಾಡುತ್ತಿರಬೇಕು ಹಾಗೆ ಕೈಯಿಂದ ಒಳ್ಳೆಯ ಕೆಲಸಗಳು ನಡೆಯುತ್ತಿರಬೇಕು ಹೀಗಾದಾಗ ಅದು ಜೀವನ ಯೋಗವಾಗುತ್ತದೆ ಒಂದೇ ಬಾರಿ ಬದಲಾವಣೆಗಳನ್ನು ತಂದುಕೊಳ್ಳಲು ಕಷ್ಟವಾಗಬಹುದು ಎಷ್ಟೇ ಧ್ಯಾನ ಪ್ರಾಣಾಯಾಮ ಮಾಡಿದರು ಒಂದೊಂದು ಸಾರಿ ನಮ್ಮನ್ನು ನಿಂದಿಸಿದ ಹಾಗೆ ಪರೋಕ್ಷವಾಗಿ ಹೀಯಾಳಿಸಿದ ವ್ಯಕ್ತಿಗಳು ಎದುರಿಗೆ ಸಿಕ್ಕಾಗ ಅವರ ಬಗ್ಗೆ ಪ್ರೀತಿಯ ಭಾವನೆಯನ್ನು ಬೆಳೆಸಿಕೊಳ್ಳುವಂತಹ ಮನಸ್ಥಿತಿ ಬಂತೆಂದರೆ ಸಾಕು ಜೀವನ ಯೋಗವಾಗಿ ಬಿಡುತ್ತದೆ. ಇಂತಹ ಮನೋಭಾವನೆ ಚಿಗುರುಡೆಯಬೇಕಾದರೆ ಮೊದಲು ನಾವುಗಳು ಪತಂಜಲಿ ಮಹರ್ಷಿಗಳು ತಿಳಿಸಿರುವ ಯಮ, ನಿಯಮವನ್ನು ಪಾಲಿಸಲು ನಮ್ಮೆಲ್ಲರಿಗೂ ಹೇಳಿದ್ದಾರೆ. ಯಮದಲ್ಲಿ ಬರುವ ಸತ್ಯ, ಅಹಿಂಸೆ, ಅಸ್ತೆಯ, ಬ್ರಹ್ಮಚರ್ಯ, ಅಪರಿಗ್ರಹ, ಮತ್ತು ನಿಯಮದಲ್ಲಿ ಶೌಚ, ಸಂತೋಷ, ತಪಸ್ಸು , ಸ್ವಾಧ್ಯಾಯ, ಈಶ್ವರ ಪ್ರಣಿದಾನ ಇವುಗಳನ್ನು ಅಂತರಂಗ ಮತ್ತು ಬಹಿರಂಗದಲ್ಲಿ ಅಳವಡಿಸಿಕೊಳ್ಳಲೇಬೇಕು.

ಕನ್ನಡ ಪೋಸ್ಟ್ ಹೆಲ್ತ್

ಇದನ್ನೇ ಶರಣರು ಬಳಸಿ ಬ್ರಹ್ಮಚಾರಿ, ಉಂಡು ಉಪವಾಸಿ, ಅಂದರೆ ಯಾವುದಕ್ಕೂ ಅಂಟಿದರೂ ಅಂಟದಂತೆ ಜೀವನ ನಡೆಸಬೇಕು ಆಗ ಮಾತ್ರವೇ ಜೀವನ ಯೋಗವಾಗುವುದರಲ್ಲಿ ಅನುಮಾನವೇ ಬೇಡ ಇಲ್ಲವಾದರೆ ಬರೀ ಯೋಗವಾಗಿ ಉಳಿಯುತ್ತದೆ ಯೋಗ ರೋಗ ಗುಣಪಡಿಸಲು ಇರುವ ಸಾಧನವಷ್ಟೇ ಅಲ್ಲ ಅದು ಒಂದು ಬದುಕುವ ಕಲೆಯನ್ನು ಕಲಿಸಿಕೊಡುತ್ತದೆ.

ಇಂತಹ ಜೀವನವನ್ನು ಯೋಗ ಮಾಡಿಕೊಂಡಿರುವ ದೇಶದ ಏಳಿಗೆಗಾಗಿ ಕೆಲಸ ಮಾಡುತ್ತಿರುವ ನಮ್ಮ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಜಿ ಅವರು ಹಾಗೆ ಶ್ರೀಮತಿ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕನವರಿರಬಹುದು ದೇಶದ ಗಡಿ ಕಾಯುವುದೇ ಜೀವನದ ಮುಖ್ಯ ಯೋಗವೆಂದು ದುಡಿಯುತ್ತಿರುವವರ ಜೀವನವೇ ಒಂದು ಯೋಗ ಅಲ್ಲವೇ ಹೀಗೆ ನಾವುಗಳು ಕೂಡ ಸಿಕ್ಕ ಈ ಮನುಷ್ಯ ಜನ್ಮವನ್ನು ಬಳಸಿಕೊಂಡು ತಮ್ಮ ಕ್ಷೇತ್ರದಲ್ಲಿ ಪ್ರಾಮಾಣಿಕತೆಯಿಂದ ನಿಷ್ಠೆಯಿಂದ ಶ್ರದ್ಧೆಯಿಂದ ಕೆಲಸ ಮಾಡುತ್ತ ಹೋದರು ಜೀವನದ ಯೋಗವಾಗುತ್ತದೆ.

ಕೊನೆಗೆ ಜೀವನವನ್ನು ಯೋಗ ಮಾಡಿಕೊಂಡವರ ಬದುಕಿನ ಒಂದು ಘಟನೆ ನೋಡೋಣ ಶ್ರೀರಾಮಕೃಷ್ಣ ಪರಮಹಂಸರನ್ನ ಅಲ್ಲಿನ ಜನ ದಕ್ಷಿಣೇಶ್ವರದ ಉಚ್ಚ ಎಂದು ಕರೆಯುತ್ತಿದ್ದರು ಈ ಮಾತನ್ನು ಒಬ್ಬ ಶಿಷ್ಯ ಅವರಿಗೆ ತಿಳಿಸುತ್ತಾನೆ ಆಗ ಅವರು ಒಂದು ಮಾತನ್ನು ಹೇಳುತ್ತಾರೆ ಏನೆಂದರೆ ಈ ಜಗತ್ತಿನಲ್ಲಿ ಪ್ರತಿಯೊಬ್ಬರೂ ಹುಚ್ಚರೆ ಒಬ್ಬೊಬ್ಬರಿಗೆ ಒಂದೊಂದು ತರದ ಹುಚ್ಚು ಹಿಡಿದಿರುತ್ತದೆ ಅವರಿಗೆ ಅದು ಗೊತ್ತಾಗುವುದಿಲ್ಲ ನನಗೆ ಪರಮಾತ್ಮನ ಉಲುಮೆಯ ಹುಚ್ಚು ಹಿಡಿದಿದೆ ಬೇರೆಯವರಿಗೆ ಹಣ ಆಸ್ತಿ ಹೆಸರು ಅಧಿಕಾರದ ಹುಚ್ಚು ಹಿಡಿದಿರುತ್ತದೆ ಅಷ್ಟೇ.

ಜೀವನವನ್ನು ಯೋಗ ಮಾಡಿಕೊಂಡವರ ಮನಸ್ಥಿತಿ ಇರುವುದೇ ಹೀಗೆ ಏನಂತೀರಿ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248